# ದೀಪದ ಬೆಳಕು



ಮಕ್ಕಳ ಮೇಲೆ ಸ್ನೇಹಿತರ ಪ್ರಭಾವ ಗಾಢವಾಗಿರುತ್ತದೆ. ದೀಪದ ಬೆಳಕಿನಂತಹ ಆ ಪ್ರಭಾವ ಯಾವ ಬಗೆಯದೆಂದು ಗುರ್ತಿಸುವುದು ಪೋಷಕರ ಹೊಣೆಗಾರಿಕೆ.

■ ಸ್ವಯಂಪ್ರಭಾ

ಆರನೇ ತರಗತಿಯ ಹನಿಯಾ ಬಹಳ ಮುದ್ದಾದ ಹುಡುಗಿ. ಚೂಟಿಯಾಗಿದ್ದಳು. ಅಳಿಲಿನ ಮರಿಯಂತೆ ಮನೆ ತುಂಬಾ ಓಡಾಡಿಕೊಂಡು, ಪುಸ್ತಕವನ್ನು ಬಿಡಿಸಿ ಮಡಚಿ, ಓದುತ್ತಾ, ನಿಮಿಷಕ್ಕೊಂದು ಪ್ರಶ್ನೆ ಕೇಳುತ್ತಾ ಇರುವ ಹುಡುಗಿ. ಹನಿಯಾ ಇದ್ದರೆ ಮನೆಯಲ್ಲಿ ಕಲರವ ತುಂಬಿದಂತೆ. ಹಾಡೆಂದರೆ ಇಷ್ಟಪಡುವ ಅವಳು ಸದಾ ಒಂದಿಲ್ಲೊಂದು ಹಾಡನ್ನು ಹಾಡುತ್ತಲೇ ಓಡಾಡುವಳು.

ಈಗಿನ ಕಾಲದಲ್ಲಿ ಮಕ್ಕಳು ಅಮ್ಮನ ಕೆಲಸಗಳನ್ನು ತಾನೂ ಮಾಡುವೆ ಎನ್ನುವುದು ಅಪರೂಪವೆನ್ನಿ. ಹನಿಯಾ ಹಾಗಲ್ಲ. ನಾನೂ ಕೆಲಸ ಮಾಡಿಕೊಡುತ್ತೇನಮ್ಮಾ ಎನ್ನುತ್ತಾ ಮುಂದೆ ಬರುವ ಅಕ್ಕರೆಯ ಹುಡುಗಿ. ಅವಳ ಕಲರವವೇ ಸಂಗೀತದಂತೆ ಮನೆಯನ್ನು ಕಾಪಾಡುತ್ತಿದೆ ಎಂದು ಅಪ್ಪ–ಅಮ್ಮ ಇಬ್ಬರೂ ಆಗಾಗ ಮಾತನಾಡಿಕೊಳ್ಳುವುದಿತ್ತು.

ಇಷ್ಟೆಲ್ಲ ಚೆಂದಾಗಿರುವ ಮನೆಯಲ್ಲಿ, ಸಂತೋಷಕ್ಕೆ ಕಾರಣಳಾದ ಹನಿಯಾಳು ಒಮ್ಮೆಗೇ ಮೌನವಾಗಿಬಿಟ್ಟಳು. ಮಾತಿಲ್ಲ ಕತೆಯಿಲ್ಲ, ಹಾಡೂ ಇಲ್ಲ. ಸದಾ ಯೋಚನೆ ಮಾಡುತ್ತಾ ಕುಳಿತುಕೊಳ್ಳತೊಡಗಿದಳು. ವಾರವಾಗುವಷ್ಟರಲ್ಲಿ ಮನೆಯಲ್ಲಿ ಮೌನ ಅಸಹನೀಯವೆನ್ನಿಸಿತು. ಮಗಳಿಗೆ ಏನಾದರೂ ತೊಂದರೆ ಆಗಿರಬಹುದೇ ಎಂದು ಅಪ್ಪ–ಅಮ್ಮ ಯೋಚಿಸತೊಡಗಿದರು. ಹನಿಯಾ ಯಾಕೆ ಹೀಗೆ ಸುಮ್ಮನೇ ಕುಳಿತಿರುತ್ತಾಳೆ? ಯಾವುದಾದರೂ ಟೀವಿ ಚಾನೆಲ್ ಹಾಕಿಕೊಂಡು, ಎದುರು ಸುಮ್ಮನೇ ಕುಳಿತುಕೊಳ್ಳುವ ಹುಡುಗಿಯನ್ನು ಕಂಡು ಅಪ್ಪನಿಗೆ ಕರುಳು ಕಸಕ್ಕೆಂದಂತಾಯಿತು.

ಮಗಳೊಡನೆ ಈ ಬಗ್ಗೆ ಒಮ್ಮೆ ಸರಿಯಾಗಿ ಕುಳಿತು, ಅಕ್ಕರೆಯಿಂದ ಮಾತನಾಡುವುದು ಒಳ್ಳೆಯದು ಎಂದು ಅಮ್ಮನಿಗೆ ಅನ್ನಿಸಿತು. ಸಂಜೆ ವೇಳೆ ಸೋಫಾದಲ್ಲಿ ಕುಳಿತಿದ್ದ ಮಗಳನ್ನು ನಿಧಾನವಾಗಿ ಮಾತಿಗೆಳೆದಳು. 'ಯಾಕೆ ಮಗಾ ಹೀಗೆ ಬೇಜಾರಿನಲ್ಲಿದ್ದಿ... ಇತ್ತೀಚೆಗೆ ನೀನು ಮೊದಲಿನ ಹಾಗಿಲ್ಲವಲ್ಲಾ...' ಎಂದು ಮಾತು ಶುರು ಮಾಡಿದಳು ಅಮ್ಮ. 11 ವರ್ಷದ ಹುಡುಗಿ ಹನಿಯಾಳಿಗೆ ಏನು ಉತ್ತರಿಸಬೇಕು ಎಂದು ಮೊದಲಿಗೆ ಗೊತ್ತಾಗಲಿಲ್ಲ. ಆದರೆ ಅಮ್ಮನಿಗೆ ಏನೋ ಹೇಳಬೇಕೆಂದು ಅವಳಿಗೂ ಅನಿಸುತ್ತಿತ್ತು. ಅಮ್ಮನ ಓಲೈಕೆಯ ನಂತರ ಅವಳು ಮಾತು ಶುರು ಮಾಡಿದ್ದು ಹೀಗೆ: 'ಅಮ್ಮಾ, ಕ್ಲಾಸಿನಲ್ಲಿ ಫ್ರೆಂಡ್ಸ್ ನನಗೆ ತಮಾಷೆ ಮಾಡ್ತಾರೆ. ಓದುವ ಬಗ್ಗೆ, ಹೋಮ್‌ವರ್ಕ್ ಬಗ್ಗೆ ಮಾತನಾಡುವುದೆಂದರೆ ಅದು ಅನ್‌ಕೂಲ್ ಹುಡುಗಿಯರ ಸ್ವಭಾವವಂತೆ. ನನಗೆ ಅನ್‌ಕೂಲ್ ಎಂದೇ ಹೆಸರಿಟ್ಟು ತಮಾಷೆ ಮಾಡುತ್ತಾರೆ. ನೀನು ದಿನಾ ನನ್ನನ್ನು ಪಿಕ್ ಮಾಡಲು ಬರುತ್ತಿಯಲ್ಲ. ಅದಕ್ಕೆ ನನ್ನನ್ನು ಎಂಕೆಸಿ ಎಂದು ಕರೆಯುತ್ತಾರೆ...'

## 'ಎಂಕೆಸಿ ಎಂದರೆ?'

'ಮಾ ಕೀ ಚಮ್ಚಾ... ಶಾಲೆಯಲ್ಲಿ ನಡೆದ ಎಲ್ಲವನ್ನೂ ಮನೆಯಲ್ಲಿ ಹೇಳುವ ಮಕ್ಕಳಿಗೆ ಎಂಕೆಸಿ ಎಂದು ಹೆಸರಿದೆಯಂತೆ, ಹೌದಾ ಅಮ್ಮಾ' ಎಂದು ಹೇಳುತ್ತ ಅವಳು ಕಣ್ಣಲ್ಲಿ ನೀರು ತುಂಬಿಕೊಂಡಳು.

ತರಗತಿಯಲ್ಲಿ ಮಕ್ಕಳಿಗೆ ದೊರೆಯುವ ಸ್ನೇಹಿತರ ಧೋರಣೆಗಳು ಅವರ ಮನಸ್ಸಿನ ಮೇಲೆ ಬಹಳವೇ ಪ್ರಭಾವ ಬೀರುತ್ತದೆ. ಅಂಥ ಸಂದರ್ಭಗಳಲ್ಲಿ ಸ್ನೇಹಿತರ ಪ್ರಭಾವಗಳ ಬಗ್ಗೆ ಎಳೆಯರಿಗೆ ವಿವೇಚನೆಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ ಎಂದು ಅಮ್ಮನಿಗೆ ಅನಿಸಿತು.

'ಅಮ್ಮ, ನಾನು ಕ್ಲಾಸಿನಲ್ಲಿ ಕೆಲವರ ಜೊತೆಗೆ ಇರುವುದು ಸರಿಯಲ್ಲ ಎಂದು ಲಂಚ್ ಬ್ರೇಕ್‌ನಲ್ಲಿ ಶಯಾನ್ ಹೇಳುತ್ತಾನೆ. ಯಾವಾಗಲೂ ಪುಸ್ತಕದ ಬಗ್ಗೆಯೇ ಮಾತನಾಡುತ್ತೇನಂತೆ. ನನಗೆ ಜನರಲ್ ನಾಲೆಡ್ಜ್ ಸಿಗುವುದಿಲ್ಲವಂತೆ. ಬರೀ ಪಾಠ ಪುಸ್ತಕವನ್ನೇ ಓದಬಾರದಂತೆ. ಅದರಿಂದ ನಾನು ಬೇಗ ಬುಡ್ಡೀ ಆಗುತ್ತೇನೆ ಎಂದು ಅವನೂ ಅವನ ಸ್ನೇಹಿತರೂ ಯಾವಾಗಲೂ ಛೇಡಿಸುತ್ತಾರೆ'.

ಮಕ್ಕಳಿಗೆ ಸ್ನೇಹಿತರ ಮುಂದೆ ಅವಮಾನವಾದರೆ ಅದರ ಗಾಯ ಹೆಚ್ಚು ದಿನಗಳ ಕಾಲ ಇರುತ್ತದೆ. ಹಾಗಾಗಿ ಸಾಧ್ಯವಾದಷ್ಟು ಮಕ್ಕಳ ಸ್ನೇಹಿತರ ವಲಯವನ್ನು ಗಮನಿಸುವುದು ಅಗತ್ಯ. ಮಕ್ಕಳ ಮೇಲೆ ಅವರ ಸ್ನೇಹಿತರು ಹೇರುವ ಒತ್ತಡವನ್ನು ದೊಡ್ಡವರು ಅರ್ಥ ಮಾಡಿಕೊಳ್ಳುವುದು ಸುಲಭವೇನಲ್ಲ. ಮಕ್ಕಳು ಹೊಸ ರೀತಿಯಲ್ಲಿ ಯೋಚಿಸುವುದರಿಂದ, ಅವರು ತಮ್ಮ ಓರಗೆಯವರ ನಡುವೆ ಯಾವುದನ್ನು ಒಳಿತೆಂದು, ಯಾವುದನ್ನು ಕೆಡುಕೆಂದು ತೀರ್ಮಾನಿಸುತ್ತಾರೆ ಎನ್ನುವುದು ದೊಡ್ಡವರಿಗೆ ಥಟ್ಟನೆ ಅರ್ಥವಾಗುವುದಿಲ್ಲ. ಅಷ್ಟೇ ಅಲ್ಲ, ಸ್ನೇಹಿತರು ಒಳ್ಳೆಯ ರೀತಿಯ ಪ್ರಭಾವವನ್ನೂ ಬೀರುತ್ತಾರೆ. ಒಟ್ಟಾಗಿ ಸೂತ್ರಗಳನ್ನು ಪ್ರಮೇಯಗಳನ್ನು ಕಲಿಯುತ್ತ, ವ್ಯಾಖ್ಯೆಗಳನ್ನು ಬಾಯಿಪಾಠ ಮಾಡುತ್ತ, ಸ್ಪರ್ಧಾತ್ಮಕವಾಗಿ ಮುಂದುವರೆಯುತ್ತಾರೆ.

ಯಾವ ಪ್ರಭಾವ ಕೆಟ್ಟ ಪರಿಣಾಮವುಂಟು ಮಾಡುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಇರುವ ದಾರಿಯೊಂದೆ – ಅದು ಮಕ್ಕಳೊಡನೆ ನಿರಂತರವಾಗಿ ಮಾತನಾಡುತ್ತಾ ಇರುವುದು. ಸಂಜೆ ಶಾಲೆಯಿಂದ ಮನೆಗೆ ಬಂದ ಕೂಡಲೇ ಮಕ್ಕಳು ಹೇಳುವ ಪ್ರಶ್ನೆ ಮಾತುಗಳಿಗೆ ಕಿವಿಗೊಡಲು ಪೋಷಕರು ಸಿದ್ಧರಾಗಿ ನಿಲ್ಲುವುದು. ಅದಕ್ಕೆ ತಕ್ಕಂತಹ ಮನಸ್ಥಿತಿಯನ್ನು ಕಾಪಾಡಿಕೊಳ್ಳುವುದು.

ಹಾಗೆ ನೋಡಿದರೆ, ದೊಡ್ಡವರೂ ತಮ್ಮ ಸ್ನೇಹಿತರಿಂದ ಪ್ರಭಾವಕ್ಕೊಳಗಾಗುತ್ತಾರೆ. ಕಾರು–ಬಂಗಲೆ, ಒಡವೆ ವಸ್ತ್ರವೆಂದೋ, ಹವ್ಯಾಸಗಳೆಂದೋ, ಚಟಗಳೆಂದೋ ಸ್ನೇಹಿತರ, ಜೊತೆಗಾರರ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಭಾವದಲ್ಲಿಯೇ ಬಾಳುವೆ ನಡೆಯುತ್ತದೆ ಅಲ್ಲವೇ.

ಪ್ರತಿಕ್ರಿಯಿಸಿ: feedback@sudha.co.in